## ಡ್ಯಾನಿಯೆಲಾ ಟ್ರಾಯ್ಕೋವಿಚ್ ಸಂದರ್ಶನ

ವೃತ್ತಿಯಿಂದ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿರುವ ಡ್ಯಾನಿಯೆಲಾ ಟ್ರಾಯ್ಕೋವಿಚ್ ಸರ್ಬಿಯಾದ ಯುವ ಕವಯಿತ್ರಿ ಹಾಗೂ ಅನುವಾದಕಿ. ದಕ್ಷಿಣ ಸರ್ಬಿಯಾದ ವ್ರಾನ್ಯೆ ನಗರದಲ್ಲಿ 1980ರ ಜನವರಿ 30ರಂದು ಜನಿಸಿದರು. ಇವರ ಏಕೈಕ ಪ್ರಕಟಿತ ಕವನ ಸಂಕಲನ While Life Sees a Dream (2023). ಡ್ಯಾನಿಯೆಲಾ ಕವಿತೆಗಳು 15ಕ್ಕೂ ಹೆಚ್ಚು ಭಾಷೆಗಳಿಗೆ ತರ್ಜುಮೆಗೊಂಡಿವೆ. A Too Powerful Word ಎಂಬ ಆನ್‌ಲೈನ್ ಸಾಹಿತ್ಯ ಪತ್ರಿಕೆಯ ಸಂಪಾದಕರಾಗಿಯೂ ಕೆಲಸ ಮಾಡುತ್ತಿದ್ದಾರೆ.

**◆ ನಿಮ್ಮ ಬಾಲ್ಯದ ದಿನಗಳು ಹೇಗಿದ್ದವು? ಅದರ ಬಗ್ಗೆ ಸ್ವಲ್ಪ ತಿಳಿಸಿ...**

ಈ 45ನೇ ವಯಸ್ಸಿನಲ್ಲಿ ಹಿಂತಿರುಗಿ ನೋಡಿದರೆ, ಅಪ್ಪ, ಅಮ್ಮ, ತಮ್ಮನ ಜೊತೆ ಬೆಳೆದ ನಾನು ಸಂತುಷ್ಟ ಮಗುವಾಗಿದ್ದೆ ಎನ್ನಬಹುದು. ಬಹಳಷ್ಟು ಸಮಯವನ್ನ ನಾನು ಮತ್ತು ತಮ್ಮ ಹೊರಗೆ ಇತರ ಮಕ್ಕಳೊಂದಿಗೆ ಆಡುತ್ತಾ ಕಳೆಯುತ್ತಿದ್ದೆವು. ನಮ್ಮದು ಶ್ರೀಮಂತ ಕುಟುಂಬವಲ್ಲ. ಆದರೆ ನನ್ನ ಹಾಗೆ ನನ್ನ ತಮ್ಮ ಕೂಡ ಲಹರಿ ಮನುಷ್ಯ, ಕವಿ ಮನಸ್ಸಿನ ಹೃದಯವಂತ. ನಾವು ಸಾಕಷ್ಟು ಸಿನಿಮಾಗಳನ್ನ, ಒಪೆರಾಗಳನ್ನ ನೋಡುತ್ತಿದ್ದೆವು. ಪುಸ್ತಕಗಳನ್ನು ಓದುತ್ತಿದ್ದೆವು. ಬೇಸರ, ನಿರಾಸೆ ಯಾವತ್ತಿಗೂ ನಮ್ಮ ಹತ್ತಿರ ಸುಳಿಯಲಿಲ್ಲ. ಅಪ್ಪ ಅರ್ಚಕ. ಅಮ್ಮ ಗೃಹಿಣಿ. ಇಡೀ ಮನೆಯನ್ನು ವ್ಯವಸ್ಥಿತವಾಗಿ ನಡೆಸುತ್ತಿದ್ದದ್ದು ಅವಳೇ. ನಮ್ಮದೊಂದು ಸಾಮಾನ್ಯ ಸರ್ಬಿಯನ್ ಕುಟುಂಬ.

**◆ ಶಿಕ್ಷಕಿಯಾಗಿ ನಿಮ್ಮ ವೃತ್ತಿ ಬದುಕಿನ ಅನುಭವ ಹಂಚಿಕೊಳ್ಳಿ.**

ನಾನು ಇಂಗ್ಲಿಷ್ ಮತ್ತು ರಷಿಯನ್ ಭಾಷೆಯ ಸಾಹಿತ್ಯ ಬೋಧಿಸುವ ಶಿಕ್ಷಕಿ. 7ರಿಂದ 14 ವರ್ಷದ ವಯಸ್ಸಿನ ಮಕ್ಕಳಿಗೆ ನಾನು ಪಾಠ ಹೇಳಿ ಕೊಡುತ್ತೇನೆ. ಇದೇ ಕೆಲಸ ಮಾಡಬೇಕು ಅನ್ನೋ ಕಲ್ಪನೆ ನನಗೇನೂ ಇರಲಿಲ್ಲ. ಆಕಸ್ಮಿಕವಾಗಿ ಈ ಕೆಲಸಕ್ಕೆ ಬಂದೆ. ಸಂಬಳ ತುಸು ಕಡಿಮೆ. ಆದರೆ ಮಕ್ಕಳ ಜೊತೆಗಿನ ಈ ಒಡನಾಟವನ್ನು ನಾನು Enjoy ಮಾಡ್ತೇನೆ. ಇದರಿಂದ ನನ್ನ ಮನಸ್ಸಿಗೆ ದಿನಪೂರ್ತಿ ಉಲ್ಲಾಸ. ನನ್ನ ಆರೋಗ್ಯದ ಗುಟ್ಟೂ ಇದೇ ಇರಬಹುದು. ಆದರೆ ಬದುಕಲ್ಲಿ ಯಾವುದೂ ಸುಲಭ ಅಲ್ವಲ್ಲಾ? ಇಂಗ್ಲಿಷ್ ಭಾಷೆ ಮತ್ತು ಸಾಹಿತ್ಯದಲ್ಲಿ ಉನ್ನತ ಪದವಿ ಪಡೆಯಲು ನಾನು ಪಟ್ಟ ಪಾಡು ಅಷ್ಟಿಷ್ಟಲ್ಲ. ನಮ್ಮ ದೇಶದಲ್ಲಿ ಔದ್ಯೋಗಿಕ ಅವಕಾಶಗಳು ತೀರಾ ಕಡಿಮೆ. ಈಗಿನ ಕೆಲಸ ನನ್ನ ಡ್ರೀಮ್ ಜಾಬ್ ಅಲ್ಲದಿದ್ದರೂ, ಇದು ಸಿಕ್ಕಿರೋದು ನನ್ನ ಅದೃಷ್ಟ ಅಂತಲೇ ಹೇಳ್ಬೇಕು.

**◆ ಕವಿತೆಯ ಆರಂಭಿಕ ದಿನಗಳನ್ನು ನೆನಪಿಸಿಕೊಳ್ಳಿ. ಕಾವ್ಯ ರಚನೆಗೆ ಪ್ರೇರೇಪಿಸಿದ ನಿರ್ದಿಷ್ಟ ಕ್ಷಣ ಅಥವಾ ಘಟನೆ ಏನಾದರೂ ಇದೆಯೇ?**

ಟೀನೇಜಲ್ಲಿ ನಾನು ಕವಿತೆ ಮತ್ತು ಕಥೆಗಳನ್ನು ಬರೆಯಲು ಶುರು ಮಾಡಿದೆ. ನಿರ್ದಿಷ್ಟ ಕ್ಷಣ ಅಂತೇನಿಲ್ಲ. ಏನೋ ಕಳೆದು ಹೋಗ್ತಿದೆ ಅನ್ನೋ ಭಾವ, ಅದನ್ನು ಹೇಗಾದರೂ ಮಾಡಿ ವಾಪಸು ಪಡೆಯಬೇಕು ಅನ್ನೊ ಹಂಬಲ ನನ್ನನ್ನು ಕವಿಯಾಗಿ ಮಾಡಿರಬಹುದು. ಅದೇನೇ ಇರಲಿ ನಾನು ಕವಿಯಾಗಲೆಂದೇ ಹುಟ್ಟಿದವಳು ಎಂಬ ನಂಬಿಕೆ ಇತ್ತೀಚೆಗೆ ನಿಜ ಅನಿಸ್ತಿದೆ.